❖ ಪ್ರಶಾಂತ ಭಟ್ ಹೆಗ್ಗಾರ್

## ತುಲಾ




ವೃತ್ತಿ, ಪ್ರವೃತ್ತಿ ಎರಡನ್ನೂ ಸಮನಾಗಿ ನಿಭಾಯಿಸಿಕೊಂಡು ಹೋಗುತ್ತೀರಿ. ಒಳ್ಳೆಯ ದಾರಿಯಲ್ಲಿರುವ ನೀವು ಸಣ್ಣ ಸಣ್ಣ ವಿಷಯಗಳಿಂದ ಉಂಟಾಗುವ ಕಿಡಿಯನ್ನು ಹೊಂದಾಣಿಕೆಯಿಂದ ಬಗೆಹರಿಸಿಕೊಳ್ಳಿ.

**ಶುಭ:** 7, 17, 20

**ಅಶುಭ:** 6, 4, 19

## ಮಕರ




ಸಮಸ್ಯೆ ಇದೆ ಎಂದು ಧೃತಿಗೆಡದೇ, ಇದ್ದುದನ್ನು ಅರಿತು ತಾಳ್ಮೆ ಮತ್ತು ನಂಬಿಕೆಯಿಂದ ಮುನ್ನಡೆಯಿರಿ. ಸಂಕಷ್ಟ ಬಂದಾಗ ಬೇರೊಬ್ಬರ ಎದುರು ಕೈ ಒಡ್ಡಿದರೆ ಮುಂದೆ ಗುಲಾಮರಾಗಬೇಕಾದೀತು.

**ಶುಭ:** 1, 10, 20

**ಅಶುಭ:** 8, 4, 12, 22

## ವೃಶ್ಚಿಕ



ಎಲ್ಲವನ್ನೂ ನಿಚ್ಚಳವಾಗಿ ಪರಿಶೀಲಿಸಿಯೇ ಮುಂದುವರೆಯಿರಿ. ದೇವತಾರಾಧನೆಯಿಂದ ಶುಭ ಫಲವಿದೆ. ಪ್ರಖರವಾದ ವ್ಯಕ್ತಿತ್ವವನ್ನು ಹೊರತೋರಿಸಲು ಇದು ಸಕಾಲ. ತಾಳಿದವನು ಬಾಳಿಯಾನು.

**ಶುಭ:** 8, 18, 28

**ಅಶುಭ:** 6, 7, 17, 20

## ಕುಂಭ




ಎಲ್ಲಾ ತಪ್ಪಿಗೂ ಬೇರೆಯವರನ್ನು ದೂಷಿಸುವುದರಿಂದ ಆಗುವ ಅನಾಹುತಗಳನ್ನು ಅರಿತಿದ್ದೀರಿ. ಆತ್ಮ ವಿಮರ್ಶೆ ಮಾಡಿಕೊಳ್ಳಿ. ಅದೃಷ್ಟ ಪರೀಕ್ಷೆಗೆ ಇದು ಸಮಯವಲ್ಲ. ದುಡಿತಕ್ಕೆ ತಕ್ಕ ಪ್ರತಿಫಲ ಇದ್ದೇ ಇದೆ.

**ಶುಭ:** 11, 22, 29

**ಅಶುಭ:** 8, 3, 23

## ಧನು




ಜೀವನದುದ್ದಕ್ಕೂ ಸ್ನೇಹಿತರಿಗಾಗೇ ಬಾಳಿದ ನಿಮಗೆ ಕುಟುಂಬದೆಡೆ ಗಮನ ಕೊಡಲು ಇದು ಸಕಾಲ. ಯಾವುದೇ ಹಿಂಜರಿಕೆಯಿಲ್ಲದೇ ಕುಟುಂಬಕ್ಕೆ ಬೆನ್ನೆಲುಬಾಗಿ. ಸದ್ಗುರುವಿನ ಆರಾಧನೆಯಿಂದ ಶುಭ.

**ಶುಭ:** 9, 17, 27

**ಅಶುಭ:** 3, 13, 26

## ಮೀನ



ಜೀವನದಲ್ಲಿ ಏಳುಬೀಳು ಇದ್ದುದೇ. ದುಷ್ಟರು ಹಾಗೂ ಉಪದ್ಯಾಪಿಗಳ ಕೈಗೆ ಸಿಗದೇ ನಿಮ್ಮ ದಾರಿಯಲ್ಲಿ ಸಾಗಿ. ವಾಸ್ತವಿಕತೆಯಲ್ಲಿ ಬದುಕಿ. ಒಮ್ಮೆ ಮಾಡಿದ ತಪ್ಪಿನಿಂದ ಕಲಿತ ಪಾಠವನ್ನು ಜೀವನದುದ್ದಕ್ಕೂ ಅಳವಡಿಸಿಕೊಳ್ಳಿ.

**ಶುಭ:** 12, 21 ,3, 6

**ಅಶುಭ:** 8, 16, 24